**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೋಟ ಶ್ರೀನಿವಾಸ ಪೂಜಾರಿ ಇವರು ನಿಯಮ 72ರಡಿ ಮಂಡಿಸಿರುವ ಗಮನಸೆಳೆಯುವ ಸೂಚನೆಗೆ ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರ ಉತ್ತರ:**

**ಪ್ರಶ್ನೆ:**

ಕರಾವಳಿಯ, ಉಡುಪಿ ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗಳು ಸೇರಿದಂತೆ ಸರ್ಕಾರಿ ಬಸ್ ಸೌಲಭ್ಯಗಳಿಲ್ಲದ ಜಿಲ್ಲೆಗಳಲ್ಲಿ ಹೆಚ್ಚುವರಿ ಸರ್ಕಾರಿ ಬಸ್ ಸೌಲಭ್ಯ ಕಲ್ಪಿಸುವುದು ಹಾಗೂ ಸರ್ಕಾರಿ ಬಸ್ ಸೌಲಭ್ಯ ಕಲ್ಪಿಸುವವರೆಗೆ ಖಾಸಗಿ ಬಸ್‌ಗಳಲ್ಲಿಯೂ ಶಕ್ತಿ ಯೋಜನೆಯಡಿ ಮಹಿಳಾ ಪ್ರಯಾಣಿಕರಿಗೆ ಉಚಿತ ಬಸ್ ಪ್ರಯಾಣ ಕಲ್ಪಿಸಲು ಒತ್ತಾಯಿಸಿ, ಮಾನ್ಯ ಸಾರಿಗೆ ಸಚಿವರ ಗಮನ ಸೆಳೆಯುವುದು.

**ಉತ್ತರ:**

ಉಡುಪಿ ಜಿಲ್ಲೆಯ ವ್ಯಾಪ್ತಿಯಲ್ಲಿ ಕ.ರಾ.ರ.ಸಾ ನಿಗಮದ.ಮಂಗಳೂರು ವಿಭಾಗದ ಕುಂದಾಪುರ ಮತ್ತು ಉಡುಪಿ ಘಟಕಗಳಿಂದ ಶಾಲಾ/ ಕಾಲೇಜು ವಿದ್ಯಾರ್ಥಿಗಳು ಮತ್ತು ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ 17 ನಗರ ಸಾರಿಗೆಗಳಿಂದ 170 ಏಕ ಸುತ್ತುವಳಿಗಳಲ್ಲಿ, 43 ಸಾಮಾನ್ಯ ಸಾರಿಗೆಗಳಿಂದ 282 ಏಕ ಸುತ್ತುವಳಿಗಳಲ್ಲಿ, 74 ವೇಗದೂತ ಸಾರಿಗೆಗಳಿಂದ 84 ಏಕ ಸುತ್ತುವಳಿಗಳಲ್ಲಿ ಮತ್ತು 50 ಪ್ರತಿಷ್ಠಿತ ಸಾರಿಗೆಗಳಿಂದ 50 ಏಕ ಸುತ್ತುವಳಿಗಳಲ್ಲಿ ಒಟ್ಟಾರೆ 184 ಅನುಸೂಚಿಗಳಿಂದ 586 ಏಕ ಸುತ್ತುವಳಿಗಳ ಸಾರಿಗೆ ಸೌಲಭ್ಯವನ್ನು ಕಲ್ಪಿಸಲಾಗಿದೆ.

ಕರಾವಳಿಯ ಉಡುಪಿ ಜಿಲ್ಲೆಯಲ್ಲಿನ 267 ಗ್ರಾಮಗಳ ಪೈಕಿ 172 ಗ್ರಾಮಗಳಿಗೆ ಸಾರಿಗೆ ಸೌಲಭ್ಯ ಕಲ್ಪಿಸಲಾಗಿರುತ್ತದೆ. ಉಳಿದ 95 ಗ್ರಾಮಗಳಿಗೆ ಸಾರಿಗೆ ಸೌಲಭ್ಯವನ್ನು ಒದಗಿಸಿರುವುದಿಲ್ಲ. ಈ ಪೈಕಿ 3 ಗ್ರಾಮಗಳ ರಸ್ತೆಯು ಭಾರಿ ವಾಹನಗಳ ಕಾರ್ಯಾಚರಣೆಗೆ ಯೋಗ್ಯವಾಗಿರುವುದಿಲ್ಲ. ರಸ್ತೆ ಸಾರಿಗೆ ಸೌಲಭ್ಯವಿರುವ 92 ಗ್ರಾಮಗಳ ಸಮೀಪದವರೆಗೆ ನಿಗಮದ ಮತ್ತು ಖಾಸಗಿ ಸಾರಿಗೆ ಸೌಲಭ್ಯವಿರುತ್ತದೆ.

ದಕ್ಷಿಣ ಕನ್ನಡ ಜಿಲ್ಲೆಯ ವ್ಯಾಪ್ತಿಯಲ್ಲಿ ನಿಗಮದ ಮಂಗಳೂರು ವಿಭಾಗದ ಘಟಕ-1, ಘಟಕ-2 ಮತ್ತು ಘಟಕ-3 ಹಾಗೂ ಪುತ್ತೂರು ವಿಭಾಗದ ಪುತ್ತೂರು, ಧರ್ಮಸ್ಥಳ, ಬಿ.ಸಿ ರೋಡ್ ಮತ್ತು ಸುಳ್ಯ ಘಟಕಗಳು ಕಾರ್ಯ ನಿರ್ವಹಿಸುತ್ತಿವೆ. ಸದರಿ ಘಟಕಗಳಿಂದ ಶಾಲಾ ಕಾಲೇಜು ವಿದ್ಯಾರ್ಥಿಗಳು ಮತ್ತು ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ 34 ನಗರ ಸಾರಿಗೆಗಳಿಂದ 351 ಏಕ ಸುತ್ತುವಳಿಗಳಲ್ಲಿ, 323 ಸಾಮಾನ್ಯ ಸಾರಿಗೆಗಳಿಂದ 2416 ಏಕ ಸುತ್ತುವಳಿಗಳಲ್ಲಿ, 199 ವೇಗದೂತ ಸಾರಿಗೆಗಳಿಂದ 214 ಏಕ ಸುತ್ತುವಳಿಗಳಲ್ಲಿ ಮತ್ತು 140 ಪ್ರತಿಷ್ಠಿತ ಸಾರಿಗೆಗಳಿಂದ 150 ಏಕ ಸುತ್ತುವಳಿಗಳ ಸಾರಿಗೆ ಸೌಲಭ್ಯವನ್ನು ಕಲ್ಪಿಸಲಾಗಿದ್ದು, ಒಟ್ಟಾರೆ 696 ಅನುಸೂಚಿಗಳಿಂದ 3131 ಏಕ ಸುತ್ತುವಳಿಗಳ ಸಾರಿಗೆ ಸೌಲಭ್ಯವನ್ನು ಕಲ್ಪಿಸಲಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ 334 ಗ್ರಾಮಗಳ ಪೈಕಿ 238 ಗ್ರಾಮಗಳಿಗೆ ಸಾರಿಗೆ ಸೌಲಭ್ಯ ಕಲ್ಪಿಸಲಾಗಿರುತ್ತದೆ. ಉಳಿದ 96 ಗ್ರಾಮಗಳಿಗೆ ಸಾರಿಗೆ ಸೌಲಭ್ಯವನ್ನು ಒದಗಿಸಿರುವುದಿಲ್ಲ. ರಸ್ತೆ ಸಾರಿಗೆ ಸೌಲಭ್ಯವಿರುವ ಸದರಿ ಗ್ರಾಮಗಳ ಸಮೀಪದವರೆಗೆ ನಿಗಮದ ಮತ್ತು ಖಾಸಗಿ ಸಾರಿಗೆ ಸೌಲಭ್ಯವಿರುತ್ತದೆ.

ಮುಂದುವರೆದು, ಕರಾವಳಿಯ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ವ್ಯಾಪ್ತಿಯಲ್ಲಿ ನಿಗಮದ ವತಿಯಿಂದ ಸಾರಿಗೆ ಸೌಲಭ್ಯ ಕಲ್ಪಿಸದಿರುವ ಬಹುತೇಕ ಗ್ರಾಮಗಳಿಗೆ ಸಮಗ್ರ ಪ್ರದೇಶ ಯೋಜನೆ ಜಾರಿಗೆ ಬರುವ ಪೂರ್ವದಿಂದಲೂ ಖಾಸಗಿ ಪ್ರವರ್ತಕರು ಹೇರಳವಾಗಿ ಸಾರಿಗೆ ಸೌಲಭ್ಯವನ್ನು ಕಲ್ಪಿಸುತ್ತಿದ್ದಾರೆ. ಅಲ್ಲದೇ, ನಿಗಮದ ವತಿಯಿಂದ ಸಾರಿಗೆ ಸೌಲಭ್ಯ ಒದಗಿಸದಿರುವ ಗ್ರಾಮಗಳಿಗೆ ಬೇಡಿಕೆಗೆ ಅನುಗುಣವಾಗಿ ಹಂತ-ಹಂತವಾಗಿ ಮೂಲಭೂತ ಸೌಕರ್ಯಗಳನ್ನು ಕ್ರೋಢೀಕರಿಸಿಕೊಂಡು ಮಾರ್ಗ ಸಮೀಕ್ಷೆ ಕೈಗೊಂಡು ಸಾರಿಗೆ ಸೌಲಭ್ಯವನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುತ್ತಿರುತ್ತದೆ.

ಉತ್ತರ ಕನ್ನಡ ಜಿಲ್ಲೆಯ ವ್ಯಾಪ್ತಿಯಲ್ಲಿ ಶಿರಸಿ ಘಟಕದಿಂದ 119, ಕುಮಟಾ ಘಟಕದಿಂದ 105, ಕಾರವಾರ ಘಟಕದಿಂದ 75, ಭಟ್ಕಳ ಘಟಕದಿಂದ 58, ಯಲ್ಲಾಪೂರ ಘಟಕದಿಂದ 66, ಅಂಕೋಲಾ ಘಟಕದಿಂದ 53, ಹಳಿಯಾಳ ಘಟಕದಿಂದ 72 ಹಾಗೂ ದಾಂಡೇಲಿ ಘಟಕದಿಂದ 54 ಹೀಗೆ ಒಟ್ಟು 8 ಘಟಕಗಳಿಂದ ಒಟ್ಟಾರೆ 614 ಮಾರ್ಗ/ ಅನುಸೂಚಿಗಳಿಂದ 2.20 ಲಕ್ಷ ಕಿ.ಮೀ. ಕಾರ್ಯಾಚರಿಸಲಾಗುತ್ತಿದೆ. ಸದರಿ ಸಾರಿಗೆಗಳಲ್ಲಿ ಪ್ರತಿದಿನ ಅಂದಾಜು 2.50 ಲಕ್ಷ ಪ್ರಯಾಣಿಕರು ಪ್ರಯಾಣಿಸುತ್ತಿದ್ದಾರೆ.

ಸದರಿ ಜಿಲ್ಲಾ ವ್ಯಾಪ್ತಿಯಲ್ಲಿ ಒಟ್ಟು 1312 ನಗರ/ಹಳ್ಳಿಗಳಲ್ಲಿ 1270 ನಗರ/ಹಳ್ಳಿಗಳಿಗೆ ಸಾರಿಗೆ ಸೌಲಭ್ಯ ಕಲ್ಪಿಸಲಾಗಿರುತ್ತದೆ. ಉಳಿದ 42 ಹಳ್ಳಿಗಳಿಗೆ ಬಸ್ ಸಂಚಾರ ಯೋಗ್ಯ ರಸ್ತೆ ಇಲ್ಲದಿರುವುದರಿಂದ ಸಾರಿಗೆ ಸೌಲಭ್ಯ ಕಲ್ಪಿಸಲಾಗಿರುವುದಿಲ್ಲ. ರಸ್ತೆ ಸಾರಿಗೆ ಸೌಲಭ್ಯವಿರುವ ಸದರಿ ಗ್ರಾಮಗಳ ಸಮೀಪದವರೆಗೆ ನಿಗಮದ ಸಾರಿಗೆ ಸೌಲಭ್ಯವಿರುತ್ತದೆ.

ಕರಾವಳಿಯ ಉಡುಪಿ ಜಿಲ್ಲೆಯಲ್ಲಿ 631 ಬಸ್ಸುಗಳು ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 979 ಬಸ್ಸುಗಳು, ಸೇರಿದಂತೆ ಒಟ್ಟು 1610 ಖಾಸಗಿ ಮಜಲು ವಾಹನಗಳು (ಬಸ್‌ಗಳು) ಸಂಚರಿಸುತ್ತಿರುತ್ತವೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಯಾವುದೇ ಖಾಸಗಿ ಮಜಲು ವಾಹನಗಳು (ಬಸ್‌ಗಳು) ಇರುವುದಿಲ್ಲ.

ಸರ್ಕಾರದ ಆದೇಶ ಸಂಖ್ಯೆ: ಸಾರಿಇ 174 ಸಾಇಪ 2015, ದಿನಾಂಕ:07-03-2019ರ ಕರ್ನಾಟಕ ರಾಜ್ಯ ಸಮಗ್ರ ಪ್ರದೇಶ ಸಾರಿಗೆ ಯೋಜನೆಯನ್ವಯ ಖಾಸಗಿ ಬಸ್ ಮಾಲೀಕರಿಗೆ ಯಾವುದೇ ಹೊಸ ಮಜಲು ವಾಹನ ರಹದಾರಿಯನ್ನು ಮಂಜೂರು ಮಾಡಲು ಅವಕಾಶವಿರುವುದಿಲ್ಲ ಹಾಗೂ ಹಾಲಿ ಮಂಜೂರಾಗಿ ಆಚರಣೆಯಲ್ಲಿರುವ ಖಾಸಗಿ ಬಸ್ಸುಗಳ ರಹದಾರಿಗಳನ್ನು ನವೀಕರಿಸಲಾಗುತ್ತಿದೆ.

ರಾಜ್ಯ ಸರ್ಕಾರದ ಶಕ್ತಿ ಯೋಜನೆಯನ್ನು ಖಾಸಗಿ ಮಜಲು ಬಸ್‌ಗಳಿಗೆ ವಿಸ್ತರಿಸುವ ಬಗ್ಗೆ ಸದ್ಯಕ್ಕೆ ಯಾವುದೇ ಪ್ರಸ್ತಾವನೆ ಇರುವುದಿಲ್ಲ.

ಸಂಖ್ಯೆ: ಟಿಡಿ 123 ಟಿಸಿಕ್ಯೂ 2023

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು